**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಚಾಸಾಃ17 ಫ್ರಾಸಾಃ 10**

**ಸಿ.ಸಿ ಸಂಖ್ಯೆ: 516/2025**

| | |
|---|---|
| ಹೆಸರು | :ಜ್ಯೋತಿ |
| ಗಂಡನ ಹೆಸರು | :ದೇವಿಪ್ರಸಾದ್ |
| ಪ್ರಾಯ | :40 ವರ್ಷ |
| ಉದ್ಯೋಗ | :ಮಹಿಳಾ ಪೇದೆ, ಸುಳ್ಯ ಪೋ.ಠಾಣೆ |
| ವಾಸ | :ನಾವೂರು ಮನೆ, ಸುಳ್ಯ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 05.08.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು ದಿ.1.4.2024 ರಿಂದ ಈ ವರೆಗೆ ಸುಳ್ಯ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿ. 5.4.2025 ರಂದು ಚಾಸಾ–19 ರವರು ನನ್ನನ್ನು ಚಾಸಾ–18, ಫ್ರಾಸಾ–6 ಹಾಗೂ ಚಾಸಾ–7 ರವನ್ನು ಬೆಳಿಗ್ಗೆ 10 ಗಂಟೆಯ ಸಮಯದಲ್ಲಿ ಸಂಪಾಜೆ ಗ್ರಾಮದ ಬೀಜದಕಟ್ಟೆ ಎನ್ನುವಲ್ಲಿ ಇರುವ ಉಮ್ಮರ್ ರವರ ಜಾಗಕ್ಕೆ ಕರೆದುಕೊಂಡು ಹೋದರು. ಆ ಜಾಗವನ್ನು ಫ್ರಾಸಾ–1 ರವರು ಚಾಸಾ–19 ರವರಿಗೆ ತೋರಿಸಿಕೊಟ್ಟಿದ್ದಾರೆ. ಚಾಸಾ–19 ರವರ ಸೂಚನೆಯ ಮೇರೆಗೆ ಚಾಸಾ–18 ರವರು ಸ್ಥ,ಳ ಮಹಜರನ್ನು ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯದಲ್ಲಿ ಬರೆದಿದ್ದಾರೆ. ಆ ಸಮಯದಲ್ಲಿ ನಾನು ಪೋಟೋ ತೆಗೆದಿದ್ದೇನೆ. ಆ ಮಹಜರಿಗೆ ಚಾಸಾ–18, 19 ಫ್ರಾಸಾ–6, ಚಾಸಾ–7

ಹಾಗೂ ಫ್ರಾಸಾ–1 ರವರು ಸಹಿ ಮಾಡಿದ್ದಾರೆ. ಸದರಿ ಮಹಜರನ್ನು ನಾನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ.

ಅದೇ ಸಮಯದಲ್ಲಿ ಚಾಸಾ–19 ರವರ ಸೂಚನೆಯ ಮೇರೆಗೆ ಘಟನಾ ಸ್ಥಳದ ಕರಡು ನಕ್ಷೆಯನ್ನು ಚಾಸಾ–18 ರವರು ತಯಾರಿಸಿದ್ದಾರೆ. ಆ ನಕ್ಷೆಗೆ ಚಾಸಾ–19, ಫ್ರಾಸಾ–1, 6, ಹಾಗೂ ಚಾಸಾ–7 ರವರು ಸಹಿ ಮಾಡಿದ್ದಾರೆ. ನಾನು ಸ್ಥಳದಲ್ಲಿ ತೆಗೆದ ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ–4 ಮತ್ತು 5 ಎಂದು ಗುರುತಿಸಲಾಗಿದೆ. ತದನಂತರ ಠಾಣೆಗೆ ಹಿಂತಿರುಗಿ POCO C75 ಮೊಬೈಲನ್ನು ಡೆಲ್ ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿದ್ದ ಪೋಟೋಗಳನ್ನು ಹೆಚ್.ಪಿ ಕಂಪನಿಯ ಡಿವಿಡಿ ಗೆ ವರ್ಗಾಯಿಸಿದ್ದೇನೆ. ಆ ಬಗ್ಗೆ ನಾನು ಭಾ.ಸಾ.ಅ. ಕಲಂ 63(4) ರಡಿಯಲ್ಲಿ ಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆ. ಆ ಪ್ರಮಾಣ ಪತ್ರವನ್ನು ನಾನು ಈಗ ನೋಡುತ್ತಿದ್ದು, ಅದನ್ನು ನಿಪಿ–27 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.27(ಎ) ಎಂದು ಗುರುತಿಸಲಾಯಿತು. ನಾನು ಕೊಟ್ಟ ಡಿವಿಡಿಯನ್ನು ನೋಡಿ ಗುರುತಿಸುತ್ತೇನೆ. ಅದು ನ್ಯಾಯಾಲಯದ ಕಡತದಲ್ಲಿದ್ದು, ಅದನ್ನು ಬಹಿರಂಗ ನ್ಯಾಯಾಲಯದಲ್ಲಿ ಲ್ಯಾಪ್ ಟಾಪ್ ನಲ್ಲಿ ಪರಿಶೀಲಿಸಿ ನೋಡಿ, ಅದನ್ನು ನಿಪಿ–28 ಎಂದು ಗುರುತಿಸಲಾಯಿತು.

ದಿ. 12.7.2025 ರಂದು ಫ್ರಾಸಾ–5 ರವರು ಅವರ ಮಾಲಿಕತ್ವದ ಕೆಎ–21–ಸಿ–2785 ರ ಟಿಪ್ಪರ್ ಲಾರಿಯನ್ನು ಹಾಜರು ಪಡಿಸಿದ್ದು, ಅದನ್ನು ಚಾಸಾ–20 ರವರು ಮಹಜರ್ ಕ್ರಮ ಜರುಗಿಸಿ ವಶಪಡಿಸಿಕೊಂಡಿದ್ದಾರೆ. ಆ ಮಹಜರನ್ನು ಚಾಸಾ–20 ರವರ ಸೂಚನೆಯ ಮೇರೆಗೆ ಚಾಸಾ–18 ರವರು ಲ್ಯಾಪ್ ಟಾಪ್ ನಲ್ಲಿ ಬೆರಳಚ್ಚು ಮಾಡಿ ಪ್ರಿಂಟ್ ತೆಗೆದಿದ್ದಾರೆ. ಆ ಮಹಜರ್ ಮೂಲಕ ಚಾಸಾ–20 ರವರು ಟಿಪ್ಪರ್ ಲಾರಿಯನ್ನು ವಶಕ್ಕೆ ಪಡೆದಿದ್ದಾರೆ. ಆ ಮಹಜರ್ ಸಮಯದಲ್ಲಿ ನಾನು ಪೋಟೋ ತೆಗೆದು ವೀಡಿಯೋ ಮಾಡಿದ್ದೇನೆ. ಆ ಮಹಜರಿಗೆ ನಾನು, ಫ್ರಾಸಾ–5, ಚಾಸಾ–8, 9, 18 ಹಾಗೂ 20 ರವರು ಸಹಿ ಮಾಡಿದ್ದೇವೆ. ಸದರಿ ಮಹಜರನ್ನು ನಾನು ಈಗ

ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–8 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–8(ಬಿ) ಎಂದು ಗುರುತಿಸಲಾಯಿತು.

ತದನಂತರ ಠಾಣೆಗೆ ಹಿಂತಿರುಗಿ POCO C75 ಮೊಬೈಲನ್ನು ಡೆಲ್ ಲ್ಯಾಪ್ ಟಾಪ್ ಗೆ ಅಳವಡಿಸಿ ಅದರಲ್ಲಿದ್ದ ಪೋಟೋಗಳನ್ನು ಹೆಚ್.ಪಿ ಕಂಪನಿಯ ಡಿವಿಡಿ ಗೆ ವರ್ಗಾಯಿಸಿದ್ದೇನೆ. ಆ ಬಗ್ಗೆ ನಾನು ಭಾ.ಸಾ.ಅ. ಕಲಂ 63(4) ರಡಿಯಲ್ಲಿ ಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆ. ಆ ಪ್ರಮಾಣ ಪತ್ರವನ್ನು ನಾನು ಈಗ ನೋಡುತ್ತಿದ್ದು, ಅದನ್ನು ನಿಪಿ–29 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.29(ಎ) ಎಂದು ಗುರುತಿಸಲಾಯಿತು. ನಾನು ಕೊಟ್ಟ ಡಿವಿಡಿಯನ್ನು ನೋಡಿ ಗುರುತಿಸುತ್ತೇನೆ. ಅದು ನ್ಯಾಯಾಲಯದ ಕಡತದಲ್ಲಿದ್ದು, ಅದನ್ನು ಬಹಿರಂಗ ನ್ಯಾಯಾಲಯದಲ್ಲಿ ಲ್ಯಾಪ್ ಟಾಪ್ ನಲ್ಲಿ ಪರಿಶೀಲಿಸಿ ನೋಡಿ, ಅದನ್ನು ನಿಪಿ–30 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಪೋಟೋಗಳನ್ನು ನಾನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ–6, 7, 9 ರಿಂದ 18 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ**

ಪೋಟೊಗಳನ್ನು ನಮಗೇ ಬೇಕಾದಂತೆ ಎಡಿಟ್ ಮಾಡಬಹುದು ಎಂದರೆ ಸರಿ. ಸಾಪ್ಟ್ ವೇರ್ ಬಳಸಿ ಪೊಟೋಗಳನ್ನು ಕ್ರಾಪ್ ಮಾಡಬಹುದು, ಕಲರ್ ಬಳಸಬಹುದು, ಬೇಡದ ಅಂಶವನ್ನು ಅಳಿಸಬಹುದು, ಬೇಕಾದನ್ನು ಸೇರಿಸಬಹುದು ಎಂದರೆ ಸರಿ. ನಿಪಿ–4 ಮತ್ತು 5 ರ ಪೋಟೋಗಳಲ್ಲಿ ಇಂಟರ್ ಲಾಕ್ ಗಳು ಜಖಂ ಆಗಿರುವುದು ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ನಿಪಿ–4 ರ ಪೋಟೋಗಳಲ್ಲಿ 3 ಜನರು ನಿಂತ ಸ್ಥಳದಲ್ಲಿ ಇಂಟರ್ ಲಾಕ್ ಜಖಂಗೊಂಡಿದೆ ಎಂದು ಉತ್ತರಿಸುತ್ತಾರೆ. ನಿಪಿ–4 ರಲ್ಲಿ ಕಂಡು ಬರುವ ಜಖಂಗಳು ನಿಪಿ–5 ರಲ್ಲಿಯೂ ಕಂಡು ಬರುತ್ತವೆ.

ಮರಳು ಹಾಕಿ ಇಂಟರ್ ಲಾಕ್ ಗಳನ್ನು ಅಳವಡಿಸುತ್ತಾರೆ ಎಂದರೆ ಸರಿ. ವಾಹನಗಳು ಅದರ ಮೇಲೆ ಸಂಚರಿಸಿದಾಗ ಗ್ಯಾಪ್ ಕಂಡು ಬರುತ್ತದೆ ಎಂದರೆ ಸರಿ.

ಯಾವುದೇ ಸಂದರ್ಭದಲ್ಲಿ ಇಂಟರ್ ಲಾಕ್ ಗಳು ಗೆರೆ ಎಳೆದಂತೆ ತುಂಡಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ–4 ರಲ್ಲಿ ಇಂಟರ್ ಲಾಕುಗಳು ಅಡ್ಡಲಾಗಿ ತುಂಡಾಗಿಲ್ಲ ಎಂದರೆ ಸರಿಯಲ್ಲ. ಇಂಟರ್ ಲಾಕುಗಳನ್ನು ತೆಗೆದು ಆ ಸ್ಥಳದಲ್ಲಿ ಬೇರೆ ಇಂಟರ್ ಲಾಕುಗಳನ್ನು ಅಳವಡಿಸಬಹುದು ಎಂದರೆ ಸರಿ. ತಗ್ಗು ಪ್ರದೇಶದಲ್ಲಿ ಅಥವಾ ಗದ್ದೆ ಇದ್ದಂತಹ ಪ್ರದೇಶದಲ್ಲಿ ಇಂಟರ್ ಲಾಕ್ ಅಳವಡಿಸಿದರೆ ಅದರ ಮೇಲೆ ವಾಹನ ಸಂಚರಿಸಿದಾಗ ಅವು ಕೆಳಕ್ಕೆ ಜಗ್ಗುತ್ತವೆ ಎಂದರೆ ಸರಿ. ಗದ್ದೆ ಇರುವ ಪ್ರದೇಶವೇ ಈಗ ಭೂಪರಿವರ್ತನೆಗೊಂಡಿವೆ ಎಂದರೆ ಸರಿ. ಸಜ್ಜನ ಹಾಲ್ ನ ಆವರಣದಲ್ಲಿ ವಾಹನ ನಿಲುಗಡೆ / ಪಾರ್ಕಿಂಗ್ ವ್ಯವಸ್ಥೆ ಇದೆ ಎಂದರೆ ಸರಿ. ನಿಪಿ–4 ಮತ್ತು 5 ರಲ್ಲಿ ಕಂಡು ಬರುವ ಮಾರ್ಗವಾಗಿಯೇ ವಾಹನಗಳನ್ನು ಚಾಲನೆ ಮಾಡಿಕೊಂಡು ಹೋಗಿ ಪಾರ್ಕಿಂಗ್ ಮಾಡಬೇಕಾಗುತ್ತದೆ ಎಂದರೆ ಸರಿ.

ಮೆಲ್ನೋಟಕ್ಕೆ ಇಂಟರ್ ಲಾಕ್ ನಲ್ಲಿ ಯಾವುದೇ ಜಖಂಗಳು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ಸಜ್ಜನ ಹಾಲ್ ನಲ್ಲಿ ಸಮಾರಂಭಗಳು ನಡೆಯುತ್ತಿರುತ್ತವೆ ಎಂದರೆ ಸರಿ. ಪಿರ್ಯಾದುದಾರರು ಬಳಸಿದ ವಾಹನಗಳಿಂದಲೇ ಇಂಟರ್ ಲಾಕುಗಳು ಕೆಳಕ್ಕೆ ಜಗ್ಗಿದ್ದು, ಅಲ್ಲಿ ಯಾವುದೇ ಜಖಂ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ನಿರ್ದೇಶದ ಮೇರೆಗೆ ನ್ಯಾಯಾಲಯದಲ್ಲಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ–4 ಮತ್ತು 5 ರ ಫೋಟೋಗಳಲ್ಲಿ ಅವುಗಳನ್ನು ತೆಗೆದ ದಿನಾಂಕ ಹಾಗೂ ಸಮಯ ಕಂಡು ಬರುವುದಿಲ್ಲ ಎಂದರೆ ಸರಿ. ಈ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನಾನು ಫೋಟೋಗಳನ್ನು ಸೃಷ್ಟಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪೋಲೀಸರು ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ತಯಾರಿಸಿದರೆ ಅದಕ್ಕೆ ಸ್ಥಳದಲ್ಲಿ ಹಾಜರಿರುವ ಪೊಲೀಸರು ಎಲ್ಲರೂ ಸಹಿ ಮಾಡುತ್ತಾರೆ ಎಂದರೆ ಸರಿ.

ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ, ಸ್ಥ,ಳದಲ್ಲಿ ಪೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಚಾಸಾ– 18 ರವರ ಬಳಿ ಲ್ಯಾಪ್ ಟಾಪ್ ಇತ್ತು.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ